## ನಿಮ್ಮೊಡನೆ

# ಕತ್ತಲ ರಾಜ್ಯ

ಬೇಸಿಗೆ ಬಿಸಿಯ ಜೊತೆಗೆ ವಿದ್ಯುತ್ ಕಡಿತವನ್ನನುಭವಿಸುವುದು ಅನಿವಾರ್ಯ ಕರ್ಮ. ಆದರೆ ಈ ಬಾರಿ ಮಳೆಗಾಲದಲ್ಲೇ 'ಲೋಡ್ ಶೆಡ್ಡಿಂಗ್' ಶುರುವಾಗಿದೆ. ಕಾಲವಲ್ಲದ ಕಾಲದಲ್ಲಿ ಈ ಮಟ್ಟದ ವಿದ್ಯುತ್ ಕ್ಷಾಮ ಆವರಿಸಿರುವುದು ಜನತೆಯನ್ನು ದಿಕ್ಕೆಡಿಸಿದೆ.

ಬೇಸಿಗೆ ಶುರುವಾಗಲು ಇನ್ನೂ ಸಾಕಷ್ಟು ಕಾಲ ಇದೆ. ಈಚಿನ ವರ್ಷಗಳಲ್ಲಿ, ಬೇಸಿಗೆ ಜೊತೆಗೆ ಲೋಡ್ ಶೆಡ್ಡಿಂಗ್ ಸಹ ತಳಕು ಹಾಕಿಕೊಂಡಿದೆ. ಬೇಸಿಗೆಯಲ್ಲಿ ಜಲವಿದ್ಯುತ್ ಉತ್ಪಾದನೆ ಕುಸಿದ ಸಂದರ್ಭದಲ್ಲಿ, ಬೇಸಿಗೆ ಬಿಸಿಯ ಜೊತೆಗೆ ವಿದ್ಯುತ್ ಕಡಿತವನ್ನನುಭವಿಸುವುದು ಅನಿವಾರ್ಯ ಕರ್ಮ. ಆದರೆ ಈ ಬಾರಿ ಮಳೆಗಾಲದಲ್ಲೇ 'ಲೋಡ್ ಶೆಡ್ಡಿಂಗ್' ಶುರುವಾಗಿದೆ. ಬೆಂಗಳೂರು ಹೊರತು ಪಡಿಸಿ ನಗರ–ಪಟ್ಟಣಗಳಲ್ಲಿ ಒಂದು ಗಂಟೆ ಹಾಗೂ ಹಳ್ಳಿಗಳಲ್ಲಿ 9 ಗಂಟೆ ಲೋಡ್ ಶೆಡ್ಡಿಂಗ್ ಅನ್ನು ಅಧಿಕೃತವಾಗಿ ಜಾರಿ ಮಾಡಲಾಗಿದೆ. ಕಾಲವಲ್ಲದ ಕಾಲದಲ್ಲಿ ಈ ಮಟ್ಟದ ವಿದ್ಯುತ್ ಕ್ಷಾಮ ಆವರಿಸಿರುವುದು ಜನತೆಯನ್ನು ದಿಕ್ಕೆಡಿಸಿದೆ. ಈ ಬಿಕ್ಕಟ್ಟು, ಅಭಿವೃದ್ಧಿ ಹಾದಿಗೂ ದೊಡ್ಡ ತಡೆ.

ಈ ಮಟ್ಟದ ಅಂಧಕಾರ ಆವರಿಸುವವರೆಗೂ ನಮ್ಮನ್ನು ಆಳುವವರು ಏನು ತಾನೆ ಮಾಡುತ್ತಿದ್ದರು ಎಂಬ ಪ್ರಶ್ನೆ ಜನಸಾಮಾನ್ಯರಲ್ಲಿ ಸಹಜವಾಗಿಯೇ ಮೂಡಿದೆ. ತೆಲಂಗಾಣ ಹೋರಾಟದಿಂದಾಗಿ ಸಿಂಗರೇಣಿಯಿಂದ ಕಲ್ಲಿದ್ದಲು ಸರಬರಾಜು ಸ್ಥಗಿತಗೊಂಡಿದೆ. ಜೊತೆಗೆ ದುರಸ್ತಿ ಕಾರಣ, ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಘಟಕದ(ಆರ್‌ಟಿಪಿಎಸ್) ಏಳು ಘಟಕಗಳೂ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬಂತಹ ಕಾರಣಗಳನ್ನು ಮುಂದೊಡ್ಡಬಹುದು. ಆದರೆ ಈ ಬೆಳವಣಿಗೆಗಳು ಏಕಾಏಕಿ ಏನೂ ಸಂಭವಿಸಲಿಲ್ಲ. ಇಂತಹ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿಲ್ಲದಿರುವುದು ಸರ್ಕಾರದ ಬೇಜವಾಬ್ದಾರಿತನಕ್ಕೆ ದ್ಯೋತಕ.

ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಈ ಮೂರೂವರೆ ವರ್ಷಗಳಲ್ಲಿ ಒಂದೇ ಒಂದು ಮೆಗಾವಾಟ್ ವಿದ್ಯುತ್ ಅನ್ನೂ ಉತ್ಪಾದಿಸುವುದು ಸಾಧ್ಯವಾಗಿಲ್ಲ ಎಂಬುದನ್ನು ಗಮನಿಸಬೇಕು. ದೂರದ ಛತ್ತೀಸ್‌ಗಢದ ಶಾಖೋತ್ಪನ್ನ ವಿದ್ಯುತ್ ಘಟಕವಾಗಲಿ, ರಾಯಚೂರು ಬಳಿಯ ಇನ್ನೂ ಮೂರು ಹೊಸ ಶಾಖೋತ್ಪನ್ನ ವಿದ್ಯುತ್ ಘಟಕಗಳ ಯೋಜನೆಗಳಾಗಲಿ ಸದ್ಯಕ್ಕಂತೂ ಕಾರ್ಯಾರಂಭ ಮಾಡುವ ಸೂಚನೆಗಳಿಲ್ಲ. ಆದರೆ ದುಬಾರಿ ಬೆಲೆ ತೆತ್ತು ವಿದ್ಯುತ್ ಖರೀದಿಸುವುದರಲ್ಲಿ ಸರ್ಕಾರ ಹೆಚ್ಚು ಆಸಕ್ತಿ ತಳೆದಿದೆ. ತಲಾ ಯೂನಿಟ್‌ಗೆ ರೂ 4ರಿಂದ 12ರವರೆಗೂ ಹಣ ತೆತ್ತು ವಿದ್ಯುತ್ ಖರೀದಿಸಲು ರಾಜ್ಯ ಸರ್ಕಾರ ಹಿಂದೆ ಮುಂದೆ ನೋಡುತ್ತಿಲ್ಲ ಎಂಬಂತಹ ಆರೋಪಗಳಿವೆ. ವಾಸ್ತವವಾಗಿ ರಾಜ್ಯದ ವಿವಿಧ ಭಾಗಗಳಲ್ಲಿರುವ ತನ್ನದೇ ಶಾಖೋತ್ಪನ್ನ ಹಾಗೂ ಜಲವಿದ್ಯುತ್ ಘಟಕಗಳಿಂದ ವಿದ್ಯುತ್ ಉತ್ಪಾದಿಸಲು ಸರ್ಕಾರಕ್ಕೆ ತಲಾ ಯೂನಿಟ್‌ಗೆ ಕೇವಲ ರೂ 2 ಬೀಳುತ್ತದೆ. ಹೀಗಿದ್ದೂ ವಿದ್ಯುತ್ ಖರೀದಿಗೆ ಸರ್ಕಾರ ಆಸಕ್ತಿ ತೋರಲು ಕಾರಣವೇನು? ಇದರ ಹಿನ್ನೆಲೆಯಲ್ಲಿ 'ಕಿಕ್ ಬ್ಯಾಕ್' ಲಾಬಿಯ ಆಮಿಷಗಳಿವೆ ಎಂಬಂತಹ ಆರೋಪಗಳು ಈಗ ಜನಜನಿತ. ವಿದ್ಯುತ್ ಖರೀದಿಗಾಗಿ ಬಿಜೆಪಿ ಸರ್ಕಾರ ರೂ.7315 ಕೋಟಿಯಷ್ಟು ಅಪಾರ ಹಣ ವ್ಯಯಿಸಿದೆ. ಇಷ್ಟೊಂದು ಹಣದಲ್ಲಿ ರಾಜ್ಯದ ವಿದ್ಯುತ್ ಅಗತ್ಯಗಳನ್ನು ಪೂರೈಸುವಷ್ಟು ಮಟ್ಟಿನ 1600 ಮೆಗಾವಾಟ್ ವಿದ್ಯುತ್ ಘಟಕವನ್ನೇ ಸ್ಥಾಪಿಸಿರಬಹುದಿತ್ತು ಎಂದು ಪ್ರತಿಪಕ್ಷಗಳು ತೀವ್ರವಾಗಿ ಟೀಕಿಸಿವೆ. ವಾಸ್ತವವಾಗಿ ಖಾಸಗಿ ಉತ್ಪಾದಕರಿಂದ ವಿದ್ಯುತ್ ಖರೀದಿಯ ಮಾರ್ಗ ಇನ್ನೇನೂ ದಿಕ್ಕಿಲ್ಲದಾಗ ಕಡೆಯ ಆಶ್ರಯವಾಗಿರಬೇಕಿತ್ತು ಎಂಬುದು ಸ್ವತಂತ್ರ ವಿದ್ಯುತ್ ತಜ್ಞರ ವಾದ. ಆದರೆ ಈಗ ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್ ಖರೀದಿಯೇ ಸರ್ಕಾರದ ನೀತಿ ಎಂಬಂತಾಗಿರುವುದು ದುರಂತ.

ವಿಶ್ವ ಆರ್ಥಿಕ ಹಿಂಜರಿತದ ಪರಿಣಾಮಗಳ ನಂತರ ಆರ್ಥಿಕ ರಂಗ ಚೇತರಿಸಿಕೊಳ್ಳುತ್ತಿರುವ ಸಂದರ್ಭದಲ್ಲೇ ಈ ಪ್ರಮಾಣದ ವಿದ್ಯುತ್ ಸಂಕಷ್ಟ ದೊಡ್ಡ ಹೊಡೆತ. ಕೃಷಿ ಹಾಗೂ ಸಣ್ಣ ಕೈಗಾರಿಕೆಗಳ ಮೇಲೆ ಇದು ತೀವ್ರ ಪರಿಣಾಮ ಬೀರಲಿದೆ. ವಿದ್ಯುತ್ ಇಲ್ಲದಿದ್ದಲ್ಲಿ ಅಭಿವೃದ್ಧಿಯೂ ಇಲ್ಲ ಎಂಬುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದಂತೆ ಕಂಡು ಬರುತ್ತಿಲ್ಲ. ಅಸಾಂಪ್ರದಾಯಿಕ ವಿಧಾನಗಳಿಂದ ವಿದ್ಯುತ್ ಉತ್ಪಾದನೆಗೂ ಉತ್ಸುಕತೆ ಕಂಡು ಬರುತ್ತಿಲ್ಲ. ಹೋಗಲಿ, ವಿದ್ಯುತ್ ಕಳವು ಹಾಗೂ ಸಾಗಣೆಯಲ್ಲಿ ಆಗುತ್ತಿರುವ ನಷ್ಟ ನಿಯಂತ್ರಿಸುವಲ್ಲೇನಾದರೂ ಪ್ರಯತ್ನಗಳಿವೆಯೇ ಎಂದರೆ ಉತ್ತರ ಶೂನ್ಯ. ಆದರೆ ವಿದ್ಯುತ್ ಬೆಲೆ ಏರಿಕೆಯ ಬಿಸಿ ಮಾತ್ರ ಗ್ರಾಹಕರಿಗೆ ಇದ್ದೇ ಇರುತ್ತದೆ. ಒಟ್ಟಾರೆ, ವಿದ್ಯುತ್ ಉತ್ಪಾದನೆ, ವಿತರಣೆ ಹಾಗೂ ನಿರ್ವಹಣೆಗಳಲ್ಲಿನ ದೂರದೃಷ್ಟಿಯ ಕೊರತೆಯೇ ಇಂದಿನ ಈ ಬಿಕ್ಕಟ್ಟಿಗೆ ಮೂಲ ಕಾರಣ ಎನ್ನದೆ ವಿಧಿ ಇಲ್ಲ. ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ನಿರ್ವಹಣೆಗಿಂತ ಹೆಚ್ಚಾಗಿ ಆಂತರಿಕ ವಿವಾದಗಳನ್ನು ಬಗೆಹರಿಸಿಕೊಳ್ಳುವಲ್ಲೇ ಬಿಜೆಪಿ ಸರ್ಕಾರ ಹೆಚ್ಚಿನ ಸಮಯ ಕಳೆದಿದೆ. ಈ ಆಡಳಿತದ ವೈಫಲ್ಯದ ಫಲ ಇಂದಿನ ಈ ಅಂಧಕಾರ.

■ ಸಿ. ಜಿ. ಮಂಜುಳಾ

